ರಾಜ್ಯದ ಬರಗಾಲದ ಪರಿಸ್ಥಿತಿಯಲ್ಲಿ ಕೇಂದ್ರ ಸರ್ಕಾರ ಮಾಡಿರುವ ಸಹಾಯದ ಬಗ್ಗೆ

4247 (4960) : ಶ್ರೀ ಲಕ್ಷ್ಮಿನಾರಾಯಣ ಎಂ.ಡಿ. (ತುರುವೇಕೆರೆ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಭೀಕರ ಬರಗಾಲ ಬಂದಂತೆ ಈ ಸಮಯದಲ್ಲಿ ಕೃಷಿಗೆ ಕೇಂದ್ರ ಸರ್ಕಾರ ಮಾಡಿರುವ ಸಹಾಯ ಏನು?

ಆ) ಈ ಇಲಾಖೆಯಲ್ಲಿ ತೆಗೆದುಕೊಂಡಿರುವ ಕಾರ್ಯಕ್ರಮಗಳಾವುವು?

ಇ) ಪ್ರತಿ ತಾಲ್ಲೂಕಿನಲ್ಲಿಯೂ ತಡೆ ಅಣೆಗಳ ನಿರ್ಮಾಣಕ್ಕೆ ಪಟ್ಟಿ ಮಾಡಲಾಗಿದೆಯೇ;

ಈ) ಹಾಗಿದ್ದಲ್ಲಿ ಯಾವಾಗ ಕೆಲಸ ಆರಂಭ ಮಾಡಲಾಗುವುದು.

ಉ) ಪ್ರತಿ ತಾಲ್ಲೂಕಿಗೆ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ; ತುರುವೇಕೆರೆ ತಾಲ್ಲೂಕಿಗೆ ಎಷ್ಟು ಹಣ ಬಿಡುಗಡೆ ಆಗಿದೆ?

ಶ್ರೀ ವಿ.ಎಸ್. ಕೌಜಲಗಿ (ಕೃಷಿ ಸಚಿವರು)

ಅ)1) ಕೇಂದ್ರ ಸರ್ಕಾರದ ಆರ್ಥಿಕ ನೆರವಿನ ಪ್ರಕೃತಿ ವಿಕೋಪ ಪರಿಹಾರ ನಿಧಿಯಡಿ ಬರಗಾಲ ಪ್ರದೇಶವೆಂದು ಘೋಷಣೆ ಮಾಡಲಾಗಿರುವ ತಾಲ್ಲೂಕಿನ ರೈತರಿಗೆ ರಿಯಾಯಿತಿ ಧರದಲ್ಲಿ ಬಿತ್ತನೆ ಬೀಜಗಳ ಪೂರೈಕೆ.

2) ಜಲಾನಯನ ಅಭಿವೃದ್ಧಿ ಇಲಾಖೆಯ ಕಾಮಗಾರಿಗಳ ಅನುಷ್ಠಾನದಲ್ಲಿ ಕೇಂದ್ರ ಸರ್ಕಾರವು ಒದಗಿಸಿರುವ ಕೂಲಿಗಾಗಿ ಕಾಳಿನ ಬಳಕೆ

ಆ) ರಿಯಾಯಿತಿ ದರದಲ್ಲಿ ಬಿತ್ತನೆ ಬೀಜದ ಪೂರೈಕೆ ಜಲಾನಯನ ಅಭಿವೃದ್ಧಿ ಯೋಜನೆಯ ಕಾಮಗಾರಿಗಳಲ್ಲಿ ಕೂಲಿಗಾಗಿ ಕಾಳಿನ ಬಳಕೆ, ತಡವಾಗಿ ಮಳೆ ಬಂದ ಭಾಗಗಳಲ್ಲಿ ಪರ್ಯಾಯ ಬೆಳೆ ಪದ್ಧತಿ ಅಳವಡಿಕೆಗೆ ರೈತ ವರ್ಗದವರಿಗೆ ಮಾರ್ಗದರ್ಶನ.

ಇ) ಹೌದು

ಈ) ರಾಜ್ಯದ ಕೆಲವು ಭಾಗಗಳಲ್ಲಿ ಈಗಾಗಲೇ ಕಾಮಗಾರಿಗಳನ್ನು ಪ್ರಾರಂಭಿಸಲಾಗಿದ್ದು ಉಳಿದ ಭಾಗಗಳಲ್ಲಿ ಋತು ಮಾನ ಹಾಗೂ ಅನುದಾನದ ಲಭ್ಯತೆ ಆಧಾರದ ಮೇಲೆ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು.

ಉ) ತುಮಕೂರು ಜಿಲ್ಲೆಯ ತಾಲ್ಲೂಕುಗಳಿಗೆ 2002–03 ಮತ್ತು 2003–04ನೇ ಸಾಲಿನಲ್ಲಿ ಒಟ್ಟು ರೂ. 793.23 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ತಾಲ್ಲೂಕುವಾರು ಬಿಡುಗಡೆ ಮಾಡಿದ ಹಣದ ವಿವರ ಈ ರೀತಿ ಇದೆ. 1) ತುಮಕೂರು ರೂ. 97.52 ಲಕ್ಷ 2) ಕುಣಿಗಲ್ ರೂ. 52.22 ಲಕ್ಷ. 3) ಕೊರಟಗೆರೆ ರೂ. 84.65 ಲಕ್ಷ 4) ಮಧುಗಿರಿ ರೂ. 86.90 ಲಕ್ಷ 5) ಪಾವಗಡ ರೂ. 74.76 ಲಕ್ಷ 6) ಶಿರಾ ರೂ. 99.98 ಲಕ್ಷ 7) ಚಿಕ್ಕನಾಯಕನಹಳ್ಳಿ ರೂ. 51.91 ಲಕ್ಷ 8) ತಿಪಟೂರು ರೂ. 80.70 ಲಕ್ಷ 9) ತುರುವೇಕೆರೆ ರೂ. 64.04 ಲಕ್ಷ 10) ಗುಬ್ಬಿ ರೂ. 100.55 ಲಕ್ಷ ತುರುವೇಕೆರೆ ತಾಲ್ಲೂಕಿಗೆ ರೂ. 64.04 ಲಕ್ಷಗಳನ್ನು ಬಿಡುಗಡೆ ಮಾಡಿದೆ.

ರಾಜ್ಯದಲ್ಲಿ ಸ್ತ್ರೀಶಕ್ತಿ ಯೋಜನೆಯ ಅಡಿಯಲ್ಲಿ ಸ್ತ್ರೀಯರಿಗೆ ಕಲ್ಪಿಸಿರುವ ಅನುಕೂಲಗಳು

4248 (4961) : ಶ್ರೀ ಲಕ್ಷ್ಮಿನಾರಾಯಣ ಎಂ.ಡಿ. (ತುರುವೇಕೆರೆ) ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?